3) ವಿದ್ಯುತ್ ಬಿಲ್ಲಿನ ಬಾಕಿ ಪಾವತಿಯನ್ನು ಶೇ. ಅರ್ಧದಷ್ಟು ಬಡ್ಡಿಯೊಡನೆ 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

4) ಮಾರಾಟ ತೆರಿಗೆಯ ಬಾಕಿ ಪಾವತಿಸುವಲ್ಲಿ ಶೇ. ಅರ್ಧದಷ್ಟು ಬಡ್ಡಿಯೊಡನೆ 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

5) ಕೆಐಟಿಸಿಎಲ್ ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳು ಘಟಕಗಳು ಮುಚ್ಚಿದ ಅವಧಿಗೆ ಬಡ್ಡಿ ಲೆಕ್ಕ ಹಾಕದಿರುವುದು.

6) ಮುಂದಿನ ಅವಧಿಗೆ ಪಾವತಿ ಮಾಡಬೇಕಾದ ತೆರಿಗೆಗಳನ್ನು ಬಡ್ಡಿ ಇಲ್ಲದೇ ಪಾವತಿಸಲು ಮೂರು ವರ್ಷಗಳವರೆಗೆ ಅವಕಾಶ.

ಇ) 31-3-2001ರ ಅಂತ್ಯಕ್ಕೆ ರೂ. 338.57 ಕೋಟಿ ಸಹಾಯಧನ ಬಿಡುಗಡೆ ಬಾಕಿಯಿದ್ದು ಈ ವರ್ಷ 10.00 ಕೋಟಿ ಬಿಡುಗಡೆಯಾಗಿದೆ. 328.57 ಬಾಕಿಯಿತ್ತು.

ಈ) ಈ ವರ್ಷದ ಆಯವ್ಯಯದಲ್ಲಿ ರೂ.25.00 ಕೋಟಿ ಹಣವನ್ನು ಸಹಾಯಧನದ ಬಿಡುಗಡೆಗಾಗಿ ನಿಗಧಿಪಡಿಸಲಾಗಿದೆ. ಇದರಲ್ಲಿ ಈಗಾಗಲೇ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನುಳಿದ ರೂ.15.00 ಕೋಟಿಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು. ಪೂರ್ಣ ಸಹಾಯಧನ ಬಾಕಿಯನ್ನು ಬಿಡುಗಡೆ ಮಾಡಲು ಸರ್ಕಾರವು ಬಾಂಡ್ ಮೂಲಕ ವಿತರಣೆಯನ್ನು ಮಾಡಲು ಯೋಚಿಸಿದೆ. ಈಗ ಎಸ್.ಬಿ.ಐ. ಕ್ಯಾಪಿಟಲ್ ಮಾರ್ಕೆಟ್‌ದವರು ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತದೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ನವೋದಯ ಶಾಲೆಯಲ್ಲಿ ಅವ್ಯವಸ್ಥೆ

2682 (3056) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳ್ತಂಗಡಿ ತಾಲ್ಲೂಕು ಮುಂದಾಜಿ ನವೋದಯ ಮಾದರಿ ವಸತಿ ಶಾಲೆಯಲ್ಲಿ ಮೂಲಭೂತ ಸೌಲಭ್ಯಗಳಾದ ನೀರಿನ ವ್ಯವಸ್ಥೆ, ದೂರವಾಣಿ, ಪೀಠೋಪಕರಣಗಳು ಮತ್ತಿತರ ಸೌಲಭ್ಯಗಳು ಇಲ್ಲದೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಕುರಿತು ಕೈಗೊಂಡ ಕ್ರಮಗಳೇನು?

ಆ) ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗಾಗಿ ಒದಗಿಸಲಾಗಿರುವ ವ್ಯವಸ್ಥೆಯ ವಿವರಗಳೇನು?

ಇ) ಈ ವಸತಿ ಶಾಲೆಗೆ ಒದಗಿಸಲಾಗಿರುವ ಒಟ್ಟು ವಿವಿಧ ವರ್ಗದ ಸಿಬ್ಬಂದಿಗಳ ವಿವರಗಳೇನು? ಮಂಜೂರಾದ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? ಅವುಗಳನ್ನು ಎಂದು ಭರ್ತಿ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ನವೋದಯ ಮಾದರಿ ವಸತಿ ಶಾಲೆ ಮುಂಡಾಜಿ, ಬೆಳ್ತಂಗಡಿ ತಾಲ್ಲೂಕು ಇಲ್ಲಿ ನೀರಿನ ಕೊರತೆ ಇರುವುದಿಲ್ಲ. ಬೇಸಿಗೆಯಲ್ಲಿ ಮಾತ್ರ ಭಾವಿಯ ನೀರು ಬತ್ತಿದಾಗ ಈ ಸಮಸ್ಯೆ ಬರುತ್ತಿದ್ದು, ಇದನ್ನು ನೀಗಲು ತೋಡು ಭಾವಿಯನ್ನು ಕೊರೆಸಲಾಗಿದ್ದು ಸಮಸ್ಯೆಯನ್ನು ಪರಿಹರಿಸಲಾಗಿದೆ. ಸದರಿ ಶಾಲೆಗೆ ತೆರೆದ ಭಾವಿಯಿಂದಲೂ ಸಹ ನೀರಿನ ಸರಬರಾಜು ವ್ಯವಸ್ಥೆ ಮಾಡಲಾಗಿದ್ದು, ನೀರಿನ ಕೊರತೆ ಇರುವುದಿಲ್ಲ. ದೂರವಾಣಿ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶಾಲೆಯಲ್ಲಿ ಬೆಂಚ್ ಕುರ್ಚಿ ಹಾಗೂ ಮೇಜುಗಳನ್ನು ಒದಗಿಸಲಾಗಿದೆ. ವಿದ್ಯಾರ್ಥಿಗಳಿಗೆ ಮಲಗಲು ಟು-ಟಿಯರ್ ಮಂಚಗಳಿದ್ದು, ಸ್ಥಳಾವಕಾಶದ ಕೊರತೆಯಿಂದಾಗಿ ಬಳಸುತ್ತಿಲ್ಲ. ನಿರ್ಮಿಸುತ್ತಿರುವ ಹೊಸ ಕಟ್ಟಡದ ಕಾಮಗಾರಿಯು ಪೂರ್ಣಗೊಳ್ಳುತ್ತಿರುವುದರಿಂದ ಅಲ್ಲಿಗೆ ಸ್ಥಳಾಂತರಿಸಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದು.

ಆ) ಆರೋಗ್ಯ ಸರಿಯಿಲ್ಲದ ವಿದ್ಯಾರ್ಥಿಗಳನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ. ಮೇಲಾಗಿ ಎಲ್ಲಾ ವಿದ್ಯಾರ್ಥಿಗಳನ್ನು ಸರ್ಕಾರಿ ವೈದ್ಯರಿಂದ ಆರೋಗ್ಯ ತಪಾಸಣೆ ಮಾಡಲು ಕ್ರಮ ತೆಗೆದುಕೊಂಡಿದೆ.

ಇ) ಮಂಜೂರಾದ ಹಾಗೂ ಭರ್ತಿಯಾದ ಮತ್ತು ಖಾಲಿಯಿರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ

ಕ್ರ. ಸಂ.	ವಿವರ		ಮಂಜೂರಾದ ಹುದ್ದೆ
1)	ಪ್ರಾಂಶುಪಾಲರು	1	ಗೌರವಧನದ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.
2)	ಶಿಕ್ಷಕರು	9	--"--
3)	ದೈಹಿಕ ಶಿಕ್ಷಕರು	1	--"--
4)	ಕಲಾ ಶಿಕ್ಷಕರು	1	ಖಾಲಿ ಇದೆ.
5)	ಸಂಗೀತ ಶಿಕ್ಷಕರು	1	ಖಾಲಿ ಇದೆ.
6)	ಪ್ರಥಮ ದರ್ಜೆ ಸಹಾಯಕರು	1	ಭರ್ತಿಯಾಗಿದೆ.
7)	ಅಡಿಗೆಯವರು	2	ಭರ್ತಿಯಾಗಿದೆ.
8)	ಅಡಿಗೆ ಸಹಾಯಕರು	1	ನಿಯೋಜನೆ ಮೇರೆಗೆ ಭರ್ತಿಮಾಡಲಾಗಿದೆ
9)	ಕಸ ಗುಡಿಸುವವರು	1	ಭರ್ತಿಮಾಡಲಾಗಿದೆ
10)	ಕಾವಲುಗಾರರು	1	ಖಾಲಿ ಇದೆ.
11)	ಸ್ಟಾಫ್ ನರ್ಸ್	1	ಖಾಲಿ ಇದೆ.
		20	

ಖಾಲಿ ಇರುವ ಸಂಗೀತ ಮತ್ತು ಕಲಾ ಶಿಕ್ಷಕರ ಹುದ್ದೆಗಳನ್ನು ಗೌರವಧನದ ಮೇರೆಗೆ ನೇಮಕಾತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಶೀಘ್ರದಲ್ಲಿ ಇವುಗಳನ್ನು ಭರ್ತಿ ಮಾಡಲಾಗುವುದು. ಮತ್ತು ಖಾಲಿ ಇರುವ ಸ್ಟಾಫ್ ನರ್ಸ್ ಹುದ್ದೆಯನ್ನು ಆರೋಗ್ಯ ಇಲಾಖೆಯಿಂದ ನಿಯೋಜನೆಯ ಮೇರೆಗೆ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಗ್ರೂಪ್ 'ಡಿ' ಹುದ್ದೆಗಳನ್ನು ಭರ್ತಿ ಮಾಡಲು ಎಲ್ಲಾ ಮುಖ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾಪಂಚಾಯತ್‌ರವರುಗಳಿಗೆ ನೇಮಕಾತಿ ನಿಯಮಾನುಸಾರ ಭರ್ತಿ ಮಾಡಲು ಕ್ರಮವ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಮಾರ್ಜಿನ್ ಮನಿ ವಿತರಣೆ

2683 (3171) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಮತಿಯಿಂದ ಮಾರ್ಜಿನ್ ಮನಿ ಸಾಲ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರಿಗೆ ಅಂಗವಿಕಲರಿಗೆ ಇನ್ನಿತರರಿಗೆ ಒಟ್ಟು ಸಹಾಯ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು? ಎಷ್ಟು ಜನ ಈ ಯೋಜನೆಯಿಂದ ಸ್ವಾವಲಂಬಿಗಳಾಗಿದ್ದಾರೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಈ ಯೋಜನೆಯಡಿಯಲ್ಲಿ ಸಹಾಯ ಪಡೆದುಕೊಂಡ ಸ್ವಯಂಸೇವಾ ಸಂಸ್ಥೆಗಳೆಷ್ಟು? ಅವು ಯಾವುವು? (ತಾಲ್ಲೂಕುವಾರು ವಿವರಣೆ ನೀಡುವುದು)

ಇ) ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರಯೋಜನ ದೊರಕಿರದಿದ್ದರೆ ಕಾರಣಗಳೇನು? ವಿವರಣೆ ನೀಡುವುದು?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮತಿಯಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಮಾರ್ಜಿನ್ ಮನಿ ಯೋಜನೆಯಡಿಯಲ್ಲಿ ಧನ ಸಹಾಯ ಪಡೆದ ಫಲಾನುಭವಿಗಳ ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಬಾಗಲಕೋಟೆ ಜಿಲ್ಲೆಯಿಂದ ಈ ಯೋಜನೆಯಡಿ ಧನಸಹಾಯ ಪಡೆದ ಯಾವುದೇ ಸ್ವಯಂ ಸಂಸ್ಥೆಗಳು ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.